# ಭಟ್ಟನ ಕನಸು ಮತ್ತು ಇತರ ಕಥೆಗಳು ಎಂಬ ಕಥಾ ಸಂಕಲನದಲ್ಲಿ ಮೂಡಿಬಂದ ನೈತಿಕ ಮೌಲ್ಯಗಳು

**ಪೂರ್ಣಿಮಾ ನಾಗನಾಥರಾವ್**

ಉಪನ್ಯಾಸಕರು, ನೂತನ ಮಹಾವಿದ್ಯಾಲಯ, ಎಸ್.ಬಿ. ಟೆಂಪಲ್ ಹತ್ತಿರ,
ಕೋರ್ಟ್ ರಸ್ತೆ, ಸಂಗಮೇಶ್ವರ ನಗರ, ಕಲಬುರಗಿ.

**DOI: https://doi.org/10.5281/zenodo.18788198**

## ABSTRACT:

'ಭಟ್ಟನ ಕನಸು ಮತ್ತು ಇತರ ಕಥೆಗಳು' ಎಂಬ ಬಿ. ಟಿ. ಲಲಿತಾ ನಾಯಕ ಅವರ ಕಥಾ ಸಂಕಲನವು ನೈತಿಕ ಮೌಲ್ಯಗಳು, ಮಾನವೀಯ ಬದ್ಧತೆ, ಸನ್ಮೌಲ್ಯಗಳ ಸಂರಕ್ಷಣೆ ಹಾಗೂ ಸಮಾಜಮುಖಿ ಜಾಗೃತಿಯನ್ನು ಕೇಂದ್ರಬಿಂದುವಾಗಿಟ್ಟುಕೊಂಡಿದೆ. ಈ ಸಂಕಲನದಲ್ಲಿನ ಕಥೆಗಳು ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಎಲ್ಲರಿಗೂ ಹತ್ತಿರವಾಗುವಂತೆ ಸರಳ ನಿರೂಪಣಾಶೈಲಿ, ಸ್ಪಷ್ಟ ಚಿತ್ರಣ, ಸಂವೇದನಾತ್ಮಕ ಅನುಭವ ಹಾಗೂ ಬಾಳಿನ ನೈಜ ಸಂದರ್ಭಗಳನ್ನು ಒಳಗೊಂಡಿವೆ. ವಿಶೇಷವಾಗಿ ಮಕ್ಕಳ ಕಥೆಗಳ ಮೂಲಕ ಲೇಖಕಿ ಸಮಾಜದಲ್ಲಿನ ಭೇದ–ಭಾವ, ಅಹಂಕಾರ, ಆಸೆ, ವಂಚನೆ, ಹೊಟ್ಟೆಕಿಚ್ಚು, ದುರಾಸೆ ಮುಂತಾದ ಮಾನವೀಯ ದುರ್ಗುಣಗಳನ್ನು ಪ್ರಾಣಿಗಳು, ಪಕ್ಷಿಗಳು, ರಾಜಕುಮಾರರು–ಕುಮಾರಿಯರು ಮತ್ತು ಸಾಮಾನ್ಯ ಜನರ ಜೀವನದ ಮೂಲಕ ಕಲಾತ್ಮಕವಾಗಿ ನಿರೂಪಿಸಿದ್ದಾರೆ.

'ವಂಚನೆಯ ಫಲ', 'ಮಾತನಾಡುವ ಕೋಣ', 'ಭಟ್ಟನ ಕನಸು', 'ನರಿ ಮತ್ತು ಪಾರಿವಾಳ', 'ಕಟಪ ನರಿ', 'ಕಾಗೆಯ ಸಬೂಬ', 'ಉಪಕಾರದ ಫಲ', 'ರಂಗನ ಸುಳ್ಳು ಸಿಂಗನ ಸಮರ್ಥನೆ', 'ಹೋಳಿಗೆ ತುಪ್ಪ' ಮುಂತಾದ ಕಥೆಗಳ ಮೂಲಕ ಮನುಷ್ಯನ ಅಹಂಕಾರ, ದುರಾಸೆ, ಜಿಪುಣತನ, ಸ್ವಾರ್ಥ, ಜಾತಿ–ಭೇದ, ದ್ರೋಹ ಮತ್ತಿತರ ದುರ್ಬಲತೆಗಳು ಅಂತಿಮವಾಗಿ ಅಪಮಾನ, ಅಪಾಯ ಅಥವಾ ನಾಶಕ್ಕೆ ಕಾರಣವಾಗುತ್ತವೆ ಎಂಬ ನೈತಿಕ ಪಾಠವನ್ನು ಲೇಖಕಿ ಪರಿಣಾಮಕಾರಿಯಾಗಿ ಬಿಂಬಿಸಿದ್ದಾರೆ. ಜೊತೆಗೆ ಕಾರ್ಮಿಕರು, ರೈತರು, ಸ್ತ್ರೀಯರು ಮತ್ತು ಸಾಮಾನ್ಯ ಜನರ ಬದುಕಿನ ನೋವು, ಹೋರಾಟ, ಕನಸು ಮತ್ತು ಬದ್ಧತೆಯನ್ನು ಆಳವಾಗಿ ವ್ಯಕ್ತಪಡಿಸಿದ್ದಾರೆ.

ಈ ಸಂಕಲನದ ಮೂಲಕ ಬೆಳೆಯುತ್ತಿರುವ ಮಕ್ಕಳಲ್ಲಿ ಸಹಾನುಭೂತಿ, ಮನುಷ್ಯಪ್ರೇಮ, ಕೃತಜ್ಞತೆ, ಪ್ರಾಮಾಣಿಕತೆ, ಜವಾಬ್ದಾರಿ ಹಾಗೂ ಸಮಾಜಮುಖಿ ಬದುಕೆಂಬ ಮೌಲ್ಯಗಳನ್ನು ಬೆಳೆಸುವ ಉದ್ದೇಶ ಸ್ಪಷ್ಟವಾಗಿ ಗೋಚರಿಸುತ್ತದೆ. ಇದರಿಂದಲೇ ಕಥೆಗಳು ಮನರಂಜನೆಯ ಮಾಧ್ಯಮವಾಗಿರುವುದರ ಜೊತೆಗೆ ಬಾಲಮನದಲ್ಲಿ ನೈತಿಕ ಸಿದ್ಧಾಂತ ಮತ್ತು ಶಿಸ್ತನ್ನು ಬಿತ್ತುವ ಪರಿಣಾಮಕಾರಿ ಶೈಕ್ಷಣಿಕ ಸಂಪನ್ಮೂಲವಾಗುತ್ತವೆ. ಆದ್ದರಿಂದ ಈ ಕಥಾ ಸಂಕಲನವು ಲಲಿತಾ ನಾಯಕರ ಸಮಾಜಪರ ದೃಷ್ಟಿಕೋನವನ್ನು ಪ್ರತಿಬಿಂಬಿಸುವುದರೊಂದಿಗೆ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಸಮೃದ್ಧ ಕೊಡುಗೆಯಾಗಿದೆ ಎಂದು ಹೇಳಬಹುದು.

**KEYWORDS:**
ನೈತಿಕ ಮೌಲ್ಯಗಳು, ಮಕ್ಕಳ ಸಾಹಿತ್ಯ, ಸಮಾಜಪರತೆ, ಮನುಷ್ಯಪ್ರೇಮ, ಸಹಾನುಭೂತಿ, ವಂಚನೆ.

ಕಥೆಯೆನ್ನುವುದು ಅನುಭವಗಳನ್ನು ಕಟ್ಟಿ ಮತ್ತೊಬ್ಬರಿಗೆ ಹೇಳುವ ಕ್ರಿಯೆಯಾಗಿದೆ. ಇದು ಸಮಾಜ ಜೀವಿಯಾದ ಮಾನವನ ಜೀವಂತಿಕೆಯ ಪ್ರತೀಕವೂ ಆಗಿದೆ. ಜಗತ್ತಿನಲ್ಲಿ ಪ್ರತಿಯೊಬ್ಬ ಮಾನವನೂ ಸಹ ಒಂದಿಲ್ಲ ಒಂದು ಕಥೆಯನ್ನು ಹೇಳುತ್ತಲೋ ಇಲ್ಲವೇ ಮತ್ತೊಬ್ಬರ ಕಥೆಯನ್ನು ಕೇಳುತ್ತಲೋ ಬೆಳೆದಿದ್ದಾನೆ, ಬೆಳೆಯುತ್ತಿರುತ್ತಾನೆ. ಕಥೆಯೆಂದರೆ ಯಾರಿಗೆ ಇಷ್ಟವಾಗುವುದಿಲ್ಲ? ಬಾಲಕರಿಂದ ಹಿಡಿದು ಯುವಕ-ಯುವತಿಯರು, ವೃದ್ಧರೂ ಸಹ ಕಥೆ ಹೇಳುವುದಕ್ಕೆ, ಕೇಳುವುದಕ್ಕೆ ಇಷ್ಟಪಡುತ್ತಾರೆ. ಅಂದರೆ ಈ "ಕಥೆಯೆಂಬ ಮಾಂತ್ರಿಕ ಶಕ್ತಿಯ ಹಿಡಿತಕ್ಕೆ ಒಳಗಾಗದವರಿಲ್ಲ, ಅಂಥವರಿಗೆ ವಯಸ್ಸಿನ ಮಿತಿಯಿಲ್ಲ. ಜಾತಿ, ಅಂತಸ್ತು, ವರ್ಗಭೇದವಿಲ್ಲ. ಸಮಯದ ಬಂಧನವಿಲ್ಲ. ಹಾಗೆಯೇ ಕಥೆಯು ಕೂಡ ಯಾವುದೇ ಜನಾಂಗ, ದೇಶ ಅಥವಾ ಕಾಲಕ್ಕೆ ಸೀಮಿತವಾದುದಲ್ಲ. ಅದು ಸರ್ವವ್ಯಾಪಿಯಾದುದು, ಸಾರ್ವಕಾಲಿಕವಾದುದು ಹಾಗೂ ಸದಾಕಾಲ ಸರ್ವರಿಗೂ ಆಪ್ತವಾದುದು" ಎಂದು ಹೇಳಬಹುದು.

ಸಾಹಿತಿಕವಾಗಿ ಕಥಾ ಸಾಹಿತ್ಯವು "ಮಾಸ್ತಿ ಪರಂಪರೆ ಮೀರಿ ಕಥಾ ಸಾಹಿತ್ಯ ಪ್ರಗತಿಶೀಲ ಪರಂಪರೆಯ ತಿರುವಿನಲ್ಲಿದ್ದಾಗ ಬಂಡಾಯದ ಕಥೆಗಳು ಬೀಜ ಮೊಳಕೆ ಒಡೆಯಲು ಪ್ರಾರಂಭಿಸಿದ್ದವು." ಅಂದರೆ ಬಂಡಾಯ ಸಾಹಿತ್ಯದ ಕಾಲಕ್ಕೆ ಬಂದಾಗ ಕಥೆಗಳು ದಲಿತರ, ಸ್ತ್ರೀಯರ ಮೇಲಾದ ದೌರ್ಜನ್ಯ, ಅನ್ಯಾಯ, ಅವಮಾನ, ಶೋಷಣೆಗಳು ಕಥೆಯೊಳಗೆ ಪ್ರವೇಶ ಪಡೆದವು. ಇಂಥ ನೈಜ ಘಟನೆಗಳು, ಪ್ರಸಂಗಗಳನ್ನು ಸೆರೆಹಿಡಿದು ಕಲಾತ್ಮಕವಾಗಿ, ಸಂವೇದನಾತ್ಮಕ ವಿಷಯವನ್ನು ಅಭಿವ್ಯಕ್ತಿಸಿ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಮನ್ನಣೆಯನ್ನು ಪಡೆದುಕೊಂಡವು. ಅನುಭವ ಮತ್ತು ತನ್ನ ಸಮುದಾಯದಲ್ಲಿ ಹಾಗೂ ಸಮಾಜದಲ್ಲಿ ಅನುಭವಿಸುತ್ತಿರುವ ಸ್ತ್ರೀಯರ, ದಲಿತರ, ರೈತರ, ಸಾಮಾನ್ಯ ಜನರ, ಕಾರ್ಮಿಕರ ನೋವಿನ ವ್ಯಥೆಯನ್ನು, ಕಾಲಾನುಕಾಲದಿಂದ ಬಂದ ದೀನದಲಿತರ ಪರಿಸ್ಥಿತಿಯ ನಾನಾ ಮುಖಗಳನ್ನು ಅನಾವರಣಗೊಳಿಸಿದ್ದಾರೆ. ಹೀಗೆ ಕನ್ನಡ ಸಾಹಿತ್ಯಕ್ಕೆ ಕಥಾ ಪ್ರಕಾರದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಾ ರಕ್ತ ಮಾಂಸಗಳ ಅಸಲಿ ಅನುಭವಗಳನ್ನು ಸಾಹಿತ್ಯದ ಮೂಲಕ ಬದುಕಿನ ಅಪಾರ ಸಾಧ್ಯತೆಗಳನ್ನು ಬಿಚ್ಚಿಡುತ್ತಾ ಬಂದಿದ್ದಾರೆ.

ಬಿ.ಟಿ. ಲಲಿತಾ ನಾಯಕ್‌ರವರು 'ಭಟ್ಟನ ಕನಸು ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನದಲ್ಲಿ ಅತ್ಯಂತ ಅವಶ್ಯಕವಾದ ಮತ್ತು ನೈತಿಕತೆಯನ್ನು ಬೆಳೆಸುವಂತಹ ಮೌಲ್ಯಯುತವಾದ ಕಥೆಗಳನ್ನು ಸಂಗ್ರಹಿಸಿ ಕಟ್ಟಿಕೊಟ್ಟಿದ್ದಾರೆ.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವ ಹಾಗೆ ಮಕ್ಕಳ ಕಥೆಯನ್ನು ಅತ್ಯಂತ ಅಚ್ಚುಕಟ್ಟಾಗಿ ಮಕ್ಕಳಿಗೆ ತಿಳುವಳಿಕೆ, ಎಚ್ಚರಿಕೆ, ಸಮಾಜದಲ್ಲಿನ ಭೇದ-ಭಾವವನ್ನು ತಿಳಿಸುವಂತಹ ಕಥೆಗಳನ್ನು ವ್ಯವಸ್ಥಿತವಾಗಿ ನಿರೂಪಿಸಿದ್ದಾರೆ. 'ಮಕ್ಕಳ ಕಥೆ ಬರೆಯಲು ಮಕ್ಕಳಂತಹ ಮನಸ್ಸು ಬೇಕು' ಎನ್ನಲಾಗುತ್ತದೆ. ಅದರಂತೆ ಲೇಖಕಿ ಮಕ್ಕಳ ಕಥೆಗಳಿಗೆ ಇರಬೇಕಾದ ಸರಳ ನಿರೂಪಣೆ, ಮೋಹಕತೆ, ರಂಜಕತೆ, ಅರ್ಥವಂತಿಕೆಯ ಸಂಗತಿಗಳನ್ನು, ನೈಜ ಚಿತ್ರಣಗಳನ್ನು ಸಚಿತ್ರವಾಗಿ ವಿವರಿಸಿದ್ದಾರೆ.

'ವಂಚನೆಯ ಫಲ' ಎಂಬ ಕಥೆಯಲ್ಲಿ ಇನ್ನೊಬ್ಬರಿಗೆ ದ್ರೋಹ ಮಾಡಲು ಹೋದರೆ ಮೊದಲು ವಂಚನೆಗೆ ಒಳಗಾಗುವುದು ತಾನೇ ಎಂಬುದು ಈ ಕಥೆಯಲ್ಲಿ ನಿರೂಪಿತವಾಗಿದೆ. ಬೇರೆಯವರಿಗೆ ಕೆಟ್ಟದಾಗಲೀ ಎಂದು ಬಗೆದರೆ ಅದು ಸರಿಯಲ್ಲ, ಅದು ಮೊದಲು ಕೆಟ್ಟವಿಚಾರ ಮಾಡುವವನನ್ನೇ ಸಮಸ್ಯೆಗೆ ಈಡುಮಾಡುತ್ತದೆ ಎಂಬ ನೀತಿಪಾಠ ತಿಳಿಸುತ್ತದೆ. ಅದೇ ರೀತಿ ಎರಡನೆಯ ಕಥೆ 'ಮಾತನಾಡುವ ಕೋಣ' ಎಂಬ ಕಥೆಯು ಮಾನವನ ಅತಿ ಆಸೆ ಬಗ್ಗೆ ತಿಳಿಸುತ್ತದೆ. ದೊಡ್ಡವರು, ಅನುಭವಸ್ಥರು ಹೇಳುವ ಮಾತಿಗೆ ಬೆಲೆ ಕೊಡದೆ ತನ್ನ ಹುಂಬತನದಿಂದ ಹಠ ಮಾಡಿದರೆ ಅದಕ್ಕೆ ಪ್ರಾಯಶ್ಚಿತ ತಪ್ಪಿದ್ದಲ್ಲ. ಆದ್ದರಿಂದ ಕಷ್ಟ ಅನುಭವಿಸದೇ ಇರದು ಎಂಬುದನ್ನು ತಿಳಿಯುತ್ತದೆ. ಅನುಭವಸ್ಥ ಸಾಧಕ ಹೇಳಿದ, "ಅಯ್ಯೋ ನಿನ್ನ ಆ ಕೋಣ ಮಾತನಾಡದಿರುವುದೇ ಕ್ಷೇಮ. ಸೃಷ್ಟಿಕರ್ತನು ಎಲ್ಲಾ ಅರಿತೇ ಮನುಷ್ಯನ ಹೊರತು ಮಿಕ್ಕ ಪ್ರಾಣಿಗಳನ್ನು ಮೂಕವಾಗಿಸಿದ್ದಾನೆ. ಆದ್ದರಿಂದ ಅವನ ಇಚ್ಛೆಗೆ ವಿರುದ್ಧವಾಗಿ ನೀನು ಅಪೇಕ್ಷೆ ಪಡುವುದು ಸರಿಯಲ್ಲ," ಎಂದರೂ ಕೂಡ ಪಟ್ಟು ಬಿಡದೆ ತನ್ನಿಚ್ಛೆಯನ್ನು ಈಡೇರಿಸಿಕೊಂಡು ಸಮಸ್ಯೆಯ ಸುಳಿಯಲ್ಲಿ ಸಿಲುಕಿ, ತನ್ನ ಮಾನಮರ್ಯಾದೆಯನ್ನು ಕಳೆದುಕೊಳ್ಳುತ್ತಾನೆ.

'ಭಟ್ಟನ ಕನಸು' ಕಥೆಯಲ್ಲಿ ಜಿಪುಣತನ ಮಾಡುವುದಕ್ಕೂ ಒಂದು ಮಿತಿ ಇರಬೇಕು, ಅತಿಯಾಸೆ ಪಟ್ಟರೆ ಗತಿಗೆಡಿಸುತ್ತದೆ ಎಂಬ ನಾಣ್ಣುಡಿಯಂತೆ ಈ ಕಥೆಯಲ್ಲಿ ಶ್ರೀಮಂತ ವ್ಯಕ್ತಿ ಮಾಡುವ ಜಿಪುಣತನಕ್ಕೆ ಭಟ್ಟನ ಕನಸು ತಕ್ಕ ಉತ್ತರವನ್ನೇ ನೀಡುತ್ತದೆ. ತನ್ನ ತನವನ್ನೇ ಶ್ರೇಷ್ಠವೆಂದು ಅಹಂಕಾರದಿಂದ, ಗರ್ವದಿಂದ ಮೆರೆದಾಡಿದರೆ ತಕ್ಕ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂಬುದು ಇಲ್ಲಿ ಕಂಡುಬರುತ್ತದೆ.

'ನರಿ ಮತ್ತು ಪಾರಿವಾಳ' ಕಥೆಯಲ್ಲಿ ಬರುವಂತಹ ನರಿ ನಾನೇ ಜಾಣ, ಚತುರತೆಯಲ್ಲಿಯೂ ನಾನೇ ಹೆಚ್ಚು, ನನ್ನನ್ನು ಮೀರಿಸುವವರು ಈ ಜಗತ್ತಿನಲ್ಲಿ ಯಾರು ಇಲ್ಲ ಎಂದು ಜಂಭ ಕೊಚ್ಚಿಕೊಳ್ಳುತ್ತಿತ್ತು. ಆದರೆ ಅದಕ್ಕೆ ತಕ್ಕ ಪಾಠ ಕಲಿಸಬೇಕೆಂಬ ದೆಸೆಯಲ್ಲಿ ಪಾರಿವಾಳ, ನರಿಯ ಕೊಂಕುಬುದ್ದಿ, ತಿಂದರೂ ತಿಂದಿಲ್ಲವೆಂದು ಹೇಳುವಂತದ್ದು, ನಕ್ಕರೂ ನಗಲೇ ಇಲ್ಲ ಎಂದು ಸುಳ್ಳಾಡುವುದನ್ನು ಕಂಡ ಪಾರಿವಾಳ, ನರಿಯ ಜಂಬವನ್ನೇ ಉಡುಗಿಸಿತು. ಇಷ್ಟಾದರೂ ನರಿ ತನ್ನ ಬುದ್ಧಿ ಬಿಡಲಿಲ್ಲ. ಅದಕ್ಕೆ ಅಲ್ಲವೇ ಹಿರಿಯರು ನುಡಿದಿರುವುದು "ಕಲಿತ ಚಾಳಿ ಕಲ್ಲು ಹಾಕಿದರೂ ಹೋಗದು" ಎಂದು ಹೇಳುವ ರೀತಿಯಲ್ಲಿ ಪಾರಿವಾಳ ಉದ್ಗರಿಸುತ್ತದೆ.

'ಕಟಪ ನರಿ' ತನ್ನ ಬುದ್ಧಿವಂತಿಕೆಯಿಂದ ಇನ್ನೊಬ್ಬರಿಗೆ ಮೋಸ ಮಾಡುವುದೇ ಅದರ ಚಾಳಿ. ಮುಗ್ಧ ಪ್ರಾಣಿ ಕುರಿಯನ್ನು ಏನೇನೋ ಆಸೆ ತೋರಿಸಿ ಅದಕ್ಕೆ ವಂಚನೆಯಿಂದ ಬುದ್ಧಿವಾದ ಹೇಳಿ ವಂಚಿಸಿತು. ನಂತರ ಅದೇ ರೀತಿ ಜನರಿಗೂ ಡಂಬಾಚಾರದ ನಾಟಕ ಮಾಡಿ, ಜನರಿಗೂ ಸಹ ವಂಚಿಸಿ ಕುರಿಯನ್ನು ಕೊಂದು ಮಾಂಸವನ್ನು ತಿಂದಿತು. ಆದ್ದರಿಂದಲೇ ಹೇಳುವುದು ನರಿ ಜಾಣ್ಮೆ ಸಂದರ್ಭವನ್ನು ಅರಿತು ಪ್ರಜ್ಞೆಯನ್ನು ಮೆರೆಯುತ್ತದೆ ಎಂದು. 'ಕಾಗೆಯ ಸಬೂಬ' ಕಥೆಯಲ್ಲಿ ಕಾಗೆ ಮತ್ತು ಹದ್ದಿನ ನಡುವೆ ನಡೆದ ಸವಾಲಿನಲ್ಲಿ ಕಾಗೆ ತನ್ನ ಕೈಲಾಗದ್ದನ್ನು ಜಂಬದಿಂದ 'ನಾನು ನಿನ್ನಷ್ಟೆ ಶ್ರೇಷ್ಠ ಮತ್ತು ನಿನ್ನಷ್ಟೇ ವೇಗವಾಗಿ ಹಾರಬಲ್ಲೆ' ಎಂದು ಜಂಭ ಕೊಚ್ಚಿಕೊಳ್ಳುತ್ತದೆ. ಆದರೆ ಸವಾಲಾಗಿ ಸ್ವೀಕರಿಸಿ ಸ್ಪರ್ಧೆಯಲ್ಲಿ ತೊಡಗಿದಾಗ ಏನಾದರೊಂದು ಕುಂಟುನೆಪ ಹೇಳುವುದರ ಮೂಲಕ ಜಾರಿಕೊಳ್ಳುವ ಹುನ್ನಾರ ಮಾಡುತ್ತದೆ. ಈ ಕಥೆಯಲ್ಲಿ ತನ್ನ ಸ್ವಸಾಮರ್ಥ್ಯವಿದ್ದಷ್ಟು ಮಾತ್ರ ಸಾಬೀತು ಮಾಡಲು ಸಾಧ್ಯ. ಕೈಲಾಗದನ್ನು ಹಮ್ಮಿಗೆ ಬಿದ್ದು ಮಾಡುವೆನೆಂದು ಸುಳ್ಳಿನ ಕಂತೆಯನ್ನು ಹೇಳುತ್ತಾ ಕಾಗೆ ಜಾರಿಕೊಳ್ಳುವುದನ್ನು ಈ ಕಥೆಯಲ್ಲಿ ಕಾಣಬಹುದು.

'ಉಪಕಾರದ ಫಲ' ಕಥೆಯಲ್ಲಿ ನೀಲಾ, ಮಾಳಿ ಎಂಬಿಬ್ಬರು ಹೆಣ್ಣು ಮಕ್ಕಳು. ಅವರಲ್ಲಿರುವ ವೈಮನಸ್ಸು, ಸೋಮಾರಿತನ ಮತ್ತು ಮುಗ್ಧ ಮಾಳಿಯನ್ನು ನೀಲಾ ಮತ್ತು ತಿಪ್ಪಕ್ಕ ಕಾಣುವಂತದ್ದು ಮುಖ್ಯವಾಗಿದೆ. ಮಾಳಿಗೆ ಎಲ್ಲಾ ಕೆಲಸವೂ ಆಕೆಗೆ ಹಚ್ಚಿ ರಾಣಿಯಂತೆ ಉಪಚಾರ ಮಾಡಿಸಿಕೊಳ್ಳುತ್ತಿದ್ದರು. ಇದಾವುದಕ್ಕೂ ಬೇಸರಿಸದೆ ಮಾಳಿ ಸತ್ಯ ಮತ್ತು ನಿಷ್ಠೆಯಿಂದ ದುಡಿಯುತ್ತಿದ್ದಳು. ಇನ್ನೊಬ್ಬರ ಕಷ್ಟ ನೋಡಿ ಮರಗುವ ಮಾಳಿಯ ಮುಗ್ಧತೆ, ಪ್ರಾಮಾಣಿಕತೆಗೆ ಬಂಗಾರದ ಬುಟ್ಟಿಯ ಮುಚ್ಚಳ ದೊರಕಿತು ಮತ್ತು ಒಬ್ಬ ಸುಂದರ ರಾಜಕುಮಾರ ಹೊರಬಂದು ಮಾಳಿಯ ಕೈಹಿಡಿಕೊಂಡ. "ನೀನು ನಕ್ಕಾಗಲೆಲ್ಲಾ ಮುತ್ತು ಉದುರೀತು! ಗಂಡನ ಮನೆಗೆ ಹೋಗಿ ಬಾಳು" ಎಂದು ವಯಸ್ಸಾದ ಮುದುಕಿ ಆಶೀರ್ವದಿಸಿದಳು. ಮಾಳಿ ರಾಜಕುಮಾರನೊಡನೆ ಹೊರಟು ನಿಂತಾಗ ಅವರನ್ನು ಕರೆದೊಯ್ಯಲು ಆನೆ ಸಿದ್ಧವಾಯಿತು, ಹಸು ಕುಡಿಯಲು ಹಾಲು ಕೊಟ್ಟಿತು. ಗುಲಾಬಿ ಗಿಡ ಅವಳ ಮುಡಿ ತುಂಬಾ ಹೂವು ಮುಡಿಸಿ ಕಳಿಸಿತು. ಅವರು ಬರುತ್ತಿರುವುದನ್ನು ದೂರದಿಂದಲೇ ನೋಡಿದ ತಿಪ್ಪಕ್ಕನ ಹುಂಜ ಮನೆಯ ಮೇಲೆ ನಿಂತು:

**'ಮಾಳಕ್ಕ ಬಂತು**
**ಮುತ್ತನ್ನು ತಂತು**
**ಆನೆ ಮೇಲ್ಕುಂತು**
**ಭಾವನ್ಜೊತೆ ಬಂತು**
**ಕುಕ್ಕೂರಿ........ಕೂ ......'**

ಎಂದು ಕೂಗಿತು.

ಮಾಳಿಯ ಏಳ್ಗೆಯನ್ನು ಕಂಡ ತಿಪ್ಪಕ್ಕ, ನೀಲಾ ಹೊಟ್ಟೆ ಉರಿಯಿಂದ ತಾವು ಸಹ ಹಾಗೆ ಇರಬೇಕೆಂದು ದುರಾಲೋಚನೆಯಿಂದ ಮಾಳಿಯ ಹಾಗೆ ಮಾಡಲು

ಹೋದರು. ಆದರೆ ಯಾವುದೇ ಕೆಲಸ ಮಾಡದೆ ಜಂಬದಿಂದ 'ಮಾಡುವುದಿಲ್ಲ' ಎಂದು ಹೇಳಿದಳು ನೀಲಾ. ವಯಸ್ಸಾದ ಮುದುಕಿ ಸೌದೆ ಹೊರೆಹೊತ್ತು ಬರುತ್ತಿರುವುದನ್ನು ಗಮನಿಸಿದ ನೀಲಾ ನೋಡಿಯೂ ನೋಡದವಳಂತೆ ನಟನೆ ಮಾಡಿದಳು. ಕೊನೆಗೆ ಮುದುಕಿ ನೀಲಾಳನ್ನು ಊಟಕ್ಕೆಂದು ಕರೆದಳು, ಹೋಳಿಗೆ ಹಾಗೂ ಒಣರೊಟ್ಟಿಯ ತಟ್ಟೆಗಳನ್ನು ಅವಳ ಮುಂದಿರಿಸಿ "ಯಾವುದು ಬೇಕೋ ತೆಗೆದುಕೋ" ಎಂದಳು. ಆಗ ನೀಲಾ, "ಒಣರೊಟ್ಟಿ ತಿಂದ ರೂಢಿಯಿಲ್ಲ ನನಗೆ, ಹೋಳಿಗೆಯ ತಟ್ಟೆಯನ್ನೇ ತಾ," ಎಂದು ಎತ್ತಿಕೊಂಡಳು. ಆಗ ಮುದುಕಿ, "ಇಕೆಯ ದುರಾಸೆಗೆ ಒಣ ರೊಟ್ಟಿಯೂ ಕೊಡದೆ ಜಂಬದ ಹುಡುಗಿ, ನೀನು ನಕ್ಕರೆ ಬರೀ ನೆಗ್ಗಿಲು ಮುಳ್ಳೇ ಉದುರಲೀ! ತೊಲಗಾಚೆ," ಎಂದು ಓಡಿಸಿದಳು. ಆಗ ನಿರಾಸೆಯಿಂದ ನೀಲಾ ಸತ್ತೆನೋ ಕೆಟ್ಟೆನೋ ಎಂದು ಬರುತ್ತಿರುವುದನ್ನು ಕಂಡ ಹುಂಜ ಮನೆಯ ಮೇಲೆ ನಿಂತು:

**'ನೀಲಕ್ಕ ಬಂತು**
**ನೆಗ್ಗಿಲು ಮುಳ್ಳು ತಂತು**
**ಬೇಕೆಂದು ಹೋಗಿ**
**ಬೇಡದ್ದು ತಂತು**
**ಕುಕ್ಕೂರಿ........ಕೂ........'**

ಎಂದು ಕೂಗಿತು.

ನೀಲಾ ನಕ್ಕಾಗ ಅವಳ ಬಾಯಿಂದ ನೆಗ್ಗಿಲು ಮುಳ್ಳು ಉದುರತೊಡಗಿದವು. ಆಗ ತಿಪ್ಪಕ್ಕ "ಮುತ್ತು ತಾರೆ ಅಂದ್ರೆ ಮುಳ್ಳು ತಂದ್ಯಲೇ ಮೂಳಿ" ಎಂದು ಕಣ್ಣೀರು ಹಾಕಿದಳು. ತಿಪ್ಪಕ್ಕ ಈ ಕಥೆಯಿಂದ ತಿಳಿದುಬರುವುದು 'ಉಪಕಾರಕ್ಕೆ ಉತ್ತಮ ಫಲ ಸಿಕ್ಕಿತೇ ಹೊರತು, ಅಪಕಾರಕ್ಕೆ ಸಿಕ್ಕೀತೇ?'

'ರಂಗನ ಸುಳ್ಳು ಸಿಂಗನ ಸಮರ್ಥನೆ' ಎಂಬ ಕಥೆಯಲ್ಲಿ ಸಿಂಗನು ಮಾಡುವ ಕೆಲಸ, ಕಾರ್ಯಕ್ಕೆ ಸಾಹುಕಾರ ತುಂಬಾ ಪ್ರೀತಿಸುತ್ತಿದ್ದ, ಆತ್ಮೀಯತೆಯಿಂದ ಕಾಣುತ್ತಿದ್ದ. ಆದರೆ ರಂಗನಿಗೆ ಸಾಹುಕಾರ ದಿನಕ್ಕೆ ನೂರು ಬಾರಿ ಬೈಸಿಕೊಳ್ಳುತ್ತಿದ್ದ. ಇದರಿಂದ ಬೇಸತ್ತ ರಂಗನಿಗೆ ಹೊಟ್ಟೆಕಿಚ್ಚು ಹುಟ್ಟಿತು. ಹೇಗಾದರೂ ಮಾಡಿ ಸಿಂಗನನ್ನು ಸಾಹುಕಾರ ಸಿಟ್ಟಿನಿಂದ ಬೈಸಿಕೊಳ್ಳುವಂತೆ ಮಾಡಬೇಕೆಂದು ಹೊಂಚು ಹಾಕುತ್ತಿದ್ದ. ಒಂದಿನ ತೋಟದಲ್ಲಿ ಕೆಲಸ ಮಾಡಿ ಆಯಾಸಗೊಂಡಿದ್ದರು, ಆಗ ಪರಿಹಾರಕ್ಕೆಂದು ಸಿಂಗ ವಿಚಿತ್ರ ರೀತಿಯ ಒಗಟುಗಳನ್ನು ಹೇಳುತ್ತಿದ್ದ. ಆದರೆ ರಂಗನಿಗೆ ಒಗಟು ಬಿಡಿಸಲಾಗದೆ ಸೋಲುತ್ತಿದ್ದ. ಕೊನೆಗೆ ಸಿಂಗ, "ನಿನಗೆ ಯಾವುದಾದರೂ ಒಗಟು ಬಂದರೆ ಹೇಳು ನಾನು ಬಿಡಿಸುತ್ತೇನೆ," ಎಂದ. ಆಗ ರಂಗ, "ನನಗೆ ಒಗಟು ಹೇಳಲು ಬರುವುದಿಲ್ಲ, ಸುಳ್ಳು ಹೇಳಲು ಚೆನ್ನಾಗಿ ಬರುತ್ತದೆ. ನೀನಷ್ಟು ಚತುರನಿದ್ದರೆ ನಾನು ಹೇಳುವ ಸುಳ್ಳನ್ನು ನಿಜವೆಂದು ಸಮರ್ಥಿಸುತ್ತೀಯಾ?" ಎಂದು ಸವಾಲು ಹಾಕಿದ. ಆಗ ಸಿಂಗನು ರಂಗ ಹೇಳಿದ ಸುಳ್ಳಿಗೆ ಸಾಹುಕಾರನ ಮುಂದೆ ಸರಿಯೆಂದು ಸಮರ್ಥಿಸಿದನು. ಇದರಿಂದ

ಸಂತೋಷಗೊಂಡ ಸಾಹುಕಾರ ಸಿಂಗನನ್ನು ವಿಶೇಷ ಸನ್ಮಾನ ಮಾಡಿ ಗೌರವಿಸಿದ. ಇದರಿಂದ ತಿಳಿಯುವುದು "ತನ್ನ ಹೊಟ್ಟೆ ಕಿಚ್ಚು ತನ್ನನ್ನೇ ಸುಟ್ಟು ಹಾಕಿತು" ಎಂದು ನೀತಿ ಪಾಠ ತಿಳಿದುಬರುತ್ತದೆ.

'ಹೋಳಿಗೆ ತುಪ್ಪ' ಎಂಬ ಕಥೆಯಲ್ಲಿ ಕಡುಬಡವನಾದ ಅಮರಪ್ಪ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ. ಆದರೆ ಒಂದು ದಿನ ಆ ಹಳ್ಳಿಗೆ ಹರಿಕಥೆ ದಾಸರು ಬಂದಿದ್ದರು. ಅವರು 'ಭಕ್ತಿ ಹನುಮನ' ಕಥೆಯನ್ನು ಸೊಗಸಾಗಿ ನಿರೂಪಿಸಿದರು. ಅದನ್ನು ಕೇಳಲು ಹೋಗಿದ್ದ ಅಮರಪ್ಪ ಮರುದಿವಸ ದಿನದ ಗಂಜಿಗೆ ಸೌದೆಯಿಲ್ಲದೆ ಪರಿತಪಿಸುವಂತಾಯಿತು. ಇದರಿಂದ ಸೌದೆಗೆ ಹೋದರೆ, ಕೂಲಿಗೆ ಹೋಗಲು ತಡವಾಗುತ್ತದೆ. ಇದರಿಂದ ಇಂದಿನ ಕೂಲಿ ಇಲ್ಲ ಅಂದ್ರೆ ನಾಳೆಗೆ ಗಂಜಿಗೂ ಹಣವಿಲ್ಲದೆ ಉಪವಾಸ ಇರಬೇಕಾಗುತ್ತದೆ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿರುತ್ತಾನೆ. ಆಗ ಅಮರಪ್ಪನಿಗೆ ಈ ಹನುಮಪ್ಪನ ಕಥೆ ಕೇಳಲು ಹೋದ ಕಾರಣಕ್ಕೆ ಇಷ್ಟೆಲ್ಲಾ ಸಮಸ್ಯೆ ಆದದ್ದು ಎಂದು ಸಿಟ್ಟಿನಿಂದ ಹನುಮಪ್ಪನ ಗುಡಿಯ ಹೊಸ್ತಿಲನ್ನೇ ಏಕೆ ಕಡಿದುಕೊಂಡು ಹೋಗಬಾರದು? ಎಂದು ಗುಡಿಯ ಬಾಗಿಲಲ್ಲಿ ನಿಂತು ಹೊಸ್ತಿಲನ್ನು ಕಡಿಯಲೆಂದು ಕೊಡಲಿಯನ್ನು ಮೇಲೆತ್ತಿದ. ಕೂಡಲೇ ಅವನ ಎರಡು ಕೈಗಳನ್ನು ಹಿಡಿದಂತಾಯಿತು. ಆಗ ಹನುಮಪ್ಪ ಪ್ರತ್ಯಕ್ಷನಾಗಿ, "ನನ್ನ ಹೊಸ್ತಿಲು ಯಾಕೆ ಕಡಿಯುತ್ತಿರುವೆ? ಈ ಕಲ್ಲು ಹರಳು ಕೊಡ್ತೀನಿ. ಇದನ್ನು ತೆಗೆದುಕೊಂಡು ಹೋಗಿ ನೆಲ ಸಾರಿಸಿ ಅದರ ಮೇಲೆ ಇಟ್ಟು ಪೂಜೆ ಮಾಡು, ಹೊಟ್ಟೆ ತುಂಬಾ ಹೋಳಿಗೆ ಸಿಗುತ್ತೆ!" ಎಂದು ದಯಪಾಲಿಸಿದ. ಹನುಮಪ್ಪ ಇದರಿಂದ ಹಿಗ್ಗಿದ ಅಮರಪ್ಪ ಖುಷಿಯಿಂದ ಮನೆಗೆ ಬಂದು ಹೇಳಿದಂತೆ ಮಾಡಿ ಹೆಂಡತಿ–ಮಕ್ಕಳೆಲ್ಲಾ ಹರುಷದಿಂದ ಹೋಳಿಗೆಗಳನ್ನು ತಿಂದು ಸಂತೋಷಪಟ್ಟರು. ಈ ಸುದ್ದಿ ಪಕ್ಕದ ಮನೆಯಲ್ಲಿ ವಾಸವಾಗಿದ್ದ ಜಿಪುಣ ಶೆಟ್ಟಿ ಸಂಗಪ್ಪನ ಕಿವಿಗೂ ಬಿತ್ತು.

ಆ ಕ್ಷಣವೇ ತಾನು ಹನುಮಪ್ಪನಿಂದ 'ಹೋಳಿಗೆ ವರ' ಪಡೆದುಕೊಳ್ಳಬೇಕೆಂದು ತೀರ್ಮಾನಿಸಿ, ಅಮರಪ್ಪನಂತೆ ಮಾಡಲು ಹೋದ. ಆಗ ಅಲ್ಲಿ ನಡೆದ ಘಟನೆಯೇ ಬೇರೆ. ಹನುಮಪ್ಪನ ಬಾಲ ಹೆಬ್ಬಾವಿನಂತೆ ಬಿಗಿಯಾಗಿ ಸುತ್ತಿಕೊಂಡು ಬಿಟ್ಟಿತು. ಸಂಗಪ್ಪ ಭೀತಿಯಿಂದ ಗಡಗಡ ನಡುಗುತ್ತಾ, "ನನ್ನಿಂದ ತಪ್ಪಾಯ್ತು ನನ್ನಪ್ಪಾ....... ನನ್ನನ್ನು ಕ್ಷಮಿಸು ಹೊರಟು ಹೋಗ್ತೀನಿ!" ಎಂದು ಬೇಡಿಕೊಂಡ. ಆಗ ಹನುಮಪ್ಪ ಸುಮ್ಮನೆ ಬಿಡೋದಿಲ್ಲ. "ನೀನು ನನ್ನದೊಂದು ಷರತ್ತಿಗೆ ಒಪ್ಪಿಕೊಂಡರೆ ಬಿಡ್ತೀನಿ!" ಎಂದ. ಆಗ "ನೀನು ಹೇಳಿದ ಹಾಗೆ ನಡ್ಕೋತಿನಿ," ಎಂದು ಹಲ್ಲು ಗಿಂಜಿದ. ಹನುಮಪ್ಪ, "ನಿನ್ನ ಪಕ್ಕದ ಮನೆಯ ಅಮರಪ್ಪ ಆತ ನನ್ನ ಪರಮ ಭಕ್ತ. ಅವನು ತುಪ್ಪವಿಲ್ಲದ ಹೋಳಿಗೆ ಊಟ ಮಾಡುತ್ತಿದ್ದಾನೆ. ಆದ್ದರಿಂದ ಅವನ ಮನೆಗೆ ನೀನು ಪ್ರತಿದಿನ ಒಂದು ಗಿಂಡಿ ಶುದ್ಧ ತುಪ್ಪ ಕೊಡಬೇಕು. ಒಂದು ದಿನವೂ ತಪ್ಪಿಸಬಾರದು," ಎಂದ. ಅದಕ್ಕೆ ಸಂಗಪ್ಪ, "ಹಾಗೇ ಆಗಲಿ ನಮ್ಮಪ್ಪ, ನಿನ್ನ ಅಪ್ಪಣೆಯಂತೆ ನಡೆದುಕೊಳ್ತೀನಿ," ಎಂದು ದೀನವಾಗಿ ಒಪ್ಪಿದ. ಈ ಕಥೆಯಲ್ಲಿ ತಿಳಿದುಬರುವಂತದ್ದು, ಬೇರೆಯವರು ಮಾಡುತ್ತಾರೆ, ನಾನೇಕೆ ಅವರ ಹಾಗೆ ಮಾಡಬಾರದು ಎಂದು

ಹೋದರೆ ಅದಕ್ಕೆ ಪ್ರಾಯಶ್ಚಿತ ತಪ್ಪಿದ್ದಲ್ಲ ಎಂಬುದು ತಿಳಿದುಬರುತ್ತದೆ.

ಅದೇ ರೀತಿ ಇಬ್ಬರು ಗೆಳೆಯರು, ರಾಜಕುಮಾರನ ಷರತ್ತು ಕಥೆಗಳಲ್ಲಿಯೂ ನೈತಿಕ ಪಾಠವನ್ನು ತಿಳಿಸುತ್ತವೆ. ಅಲ್ಲಿ ನಡೆಯುವಂತಹ ಘಟನೆಗಳು ಪ್ರತಿಯೊಬ್ಬನನ್ನೂ ಎಚ್ಚರದಿಂದ ಇರಬೇಕೆಂಬ ಪ್ರಜ್ಞೆಯನ್ನು ಮೂಡಿಸುತ್ತವೆ. ಅವು ಸಮಾಜದಲ್ಲಿನ ಜನಸಾಮಾನ್ಯರನ್ನು ಮೋಸ ಮಾಡಲು ಏನೆಲ್ಲಾ ತಂತ್ರಗಳನ್ನು ಜನರು ಬಳಸುತ್ತಾರೆ, ಅಂತವುಗಳಿಗೆ ಮಾರುಹೋಗದ ರೀತಿಯಲ್ಲಿರಬೇಕೆಂಬ ನೀತಿಯನ್ನು ತಿಳಿಸುತ್ತವೆ.

ಈ ಕಥಾ ಸಂಕಲನದಲ್ಲಿ ಪ್ರಾಣಿ, ಪಕ್ಷಿಗಳ ಮೂಲಕ, ರಾಜಕುಮಾರ-ಕುಮಾರಿಯರಿಂದ ಜನಸಾಮಾನ್ಯರ ಮೂಲಕ ನಿರೂಪಿಸಲ್ಪಡುವ ಕಥೆಗಳು ಮನುಷ್ಯನಲ್ಲಿ ಆಸೆ, ಮೋಸ, ವಂಚನೆ, ಅಹಂಕಾರ, ಹೊಟ್ಟೆಕಿಚ್ಚು ಮನೋಭಾವ ಇದ್ದರೆ ಅವು ಮನುಷ್ಯನನ್ನು ಅಪಮಾನಕ್ಕೆ ಈಡುಮಾಡುತ್ತವೆ ಎಂಬ ನೀತಿ ತತ್ವವನ್ನು ಬೋಧಿಸುವಂತಹ ಈ ಕಥೆಗಳು ಬೆಳೆಯುವ ಮಕ್ಕಳಲ್ಲಿ ಒಳ್ಳೆಯ ನೈತಿಕತೆ ತಿಳಿಸುವುದು, ಮಾನವೀಯ ಮೌಲ್ಯಗಳನ್ನು ಬೆಳೆಸುವುದು, ಸಮಾಜ ಮುಖಿಯಾದ ಕಾಳಜಿ, ಸಾಮಾನ್ಯ ಜನರಲ್ಲಿ ಪ್ರೀತಿ-ವಾತ್ಸಲ್ಯ ಬೆಳೆಸುವಂತಹ ಸಮಾಜಪರ ಚಿಂತನೆಯನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಲೇಖಕಿ ಸಮಾಜಪರ ಪ್ರಜ್ಞೆಯನ್ನು ಈ ಕಥಾ ಸಂಕಲನದಲ್ಲಿ ಮೆರೆದಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ನಾಯಕ ಜಿ.ಎಚ್. (ಸಂ), (2013), ಕನ್ನಡ ಸಣ್ಣ ಕಥೆಗಳು, ಹೊಸದೆಹಲಿ: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.
2. ಭಗವತಿ ಎಸ್.ಎಸ್. ಮತ್ತು ಮೇಲಿನಮನಿ ಎಚ್.ಎಸ್., (2011), ಆಧುನಿಕ ಕಾದಂಬರಿಕಾರರು ಕಥೆಗಾರರು, ಗದಗ: ವಿದ್ಯಾನಿಧಿ ಪ್ರಕಾಶನ.
3. ಲಲಿತಾ ನಾಯಕ್ ಬಿ.ಟಿ., (1979), ಭಟ್ಟನ ಕನಸು (ಮತ್ತು ಇತರ ಕಥೆಗಳು), ಬೆಂಗಳೂರು: ಲಲಿತಾ ಪ್ರಕಾಶನ.
4. ಲಲಿತಾ ನಾಯಕ್ ಬಿ.ಟಿ., (2009), ನನ್ನ ಸುತ್ತಲಿನ ಸತ್ಯಗಳು, ಬಳ್ಳಾರಿ: ಲೋಹಿಯಾ ಪ್ರಕಾಶನ.